ಪ್ರಜಾವಾಣಿ

Saturday, September 24, 2011

# ಜೈನ್ ವಿವಿಯಿಂದ ವಿಮಾನಯಾನ ಎಂಜಿನಿಯರಿಂಗ್ ಆರಂಭ

**ಪ್ರಜಾವಾಣಿ ವಾರ್ತೆ**

**ಬೆಂಗಳೂರು:** ಜೈನ್ ಸ್ವಾಯತ್ತ ವಿಶ್ವ ವಿದ್ಯಾಲಯವು ವಿಮಾನಯಾನ ಕ್ಷೇತ್ರಕ್ಕೆ ಬೇಕಾದ ತಂತ್ರಜ್ಞರು, ವಿಮಾನ ಬಿಡಿ ಭಾಗ ತಯಾರಿಕೆ ಮತ್ತು ನಿರ್ವಹಣೆಗೆ ಸಂಬಂಧಿಸಿದ ಶಿಕ್ಷಣ ನೀಡಲು 'ಅಂತರ ರಾಷ್ಟ್ರೀಯ ವಿಮಾನಯಾನ ಎಂಜಿನಿಯರಿಂಗ್ ಮತ್ತು ನಿರ್ವಹಣಾ ಸಂಸ್ಥೆ' ಯನ್ನು (ಐಐಎಇಎಂ) ಆರಂಭಿಸಲಿದೆ.

ಸೆ.25ರಂದು ನಗರದ ಜೈನ್ ವಿ.ವಿ. ಆವರಣದಲ್ಲಿ ಕೇಂದ್ರ ಯೋಜನಾ ಆಯೋಗದ ಸದಸ್ಯ (ವಿಜ್ಞಾನ ಮತ್ತು ತಂತ್ರಜ್ಞಾನ) ಅ.ಕೆ.ಕಸ್ತೂರಿ ರಂಗನ್ ಸಂಸ್ಥೆಯ ಕಾರ್ಯ ಚಟುವಟಿಕೆಗೆ ಚಾಲನೆ ನೀಡಲಿದ್ದಾರೆ.

ನಗರದಲ್ಲಿ ಶುಕ್ರವಾರ ಜೈನ್ ಐಐಎಇಎಂನ ಆಡಳಿತ ಮಂಡಳಿ ಅಧ್ಯಕ್ಷ ಡಾ.ಸಿ.ಜಿ.ಕೃಷ್ಣದಾಸ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ಬಾಹ್ಯಾಕಾಶ ಮತ್ತು ಮ್ಯಾನೇಜ್‌ಮೆಂಟ್ ಸಂಸ್ಥೆಗಳ ತಂತ್ರಜ್ಞರು, ಈ ಸಂಸ್ಥೆಗೆ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಲಿದ್ದಾರೆ. ಐಐಟಿ ಕಾನ್ಪುರದ ವಾಯುಯಾನ ಎಂಜಿನಿಯರಿಂಗ್ ವಿಭಾಗದ ಮಾಜಿ ಅಧ್ಯಕ್ಷ ಡಾ.ಎನ್.ಜಿ.ಆರ್. ಅಯ್ಯಂಗಾರ್ ಬೋಧನೆ ಮಾಡಲಿದ್ದಾರೆ ಎಂದರು.

'ಇಸ್ರೊದ ಮಾಜಿ ಅಧ್ಯಕ್ಷರಾದ ಕೆ.ಕಸ್ತೂರಿ ರಂಗನ್, ಡಾ.ಜಿ.ಮಾಧವನ್ ನಾಯರ್ ಮತ್ತಿತರರನ್ನು ಒಳಗೊಂಡ ರಾಷ್ಟ್ರೀಯ ಸಲಹಾ ಸಮಿತಿಯ ಶಿಫಾರಸುಗಳ ಹಿನ್ನೆಲೆಯಲ್ಲಿ ಜಾಗತಿಕ ಮಟ್ಟದ ಈ ಸಂಸ್ಥೆಯನ್ನು ಆರಂಭಿಸಲಾಗುತ್ತಿದೆ. ಈ ಸಂಸ್ಥೆಗೆ ಎಚ್‌ಎಎಲ್, ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಾಲಯ (ಎನ್‌ಎಎಲ್), ಇಸ್ರೊ, ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ), ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ (ಎಎಐ), ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ (ಬಿಐಎಎಲ್) ಮೊದಲಾದ ಸಂಸ್ಥೆಗಳ ಅಗತ್ಯಕ್ಕೆ ತಕ್ಕಂತೆ ಪದವೀಧರರಿಗೆ ಶಿಕ್ಷಣ ನೀಡಲಾಗುವುದು. ಇದಕ್ಕೆ ಅಗತ್ಯ ಸಹಕಾರ ನೀಡಲು ಇವು ಒಪ್ಪಿಕೊಂಡಿವೆ' ಎಂದು ಹೇಳಿದರು.

ಜೈನ್ ವಿ.ವಿ. ಟ್ರಸ್ಟ್‌ನ ಅಧ್ಯಕ್ಷ ಚೆನ್‌ರಾಜ್ ಜೈನ್, ಜೈನ್ ವಿ.ವಿ. ಕುಲಪತಿ ಡಾ.ಎನ್.ಸುಂದರರಾಜನ್, ಡಾ.ಎನ್.ಜಿ.ಆರ್.ಅಯ್ಯಂಗಾರ್ ಅವರು ಗೋಷ್ಠಿಯಲ್ಲಿದ್ದರು.